ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು.

ದಿನಾಂಕ:**16.01.2025** ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ವಾದಿಯರ ಪರ ಶ್ರೀ ಯು ಎಸ್ ವಕೀಲರಿಂದ:-

ನಾನು ಪಿ.ಯು.ಸಿ ವರೆಗೂ ಓದಿರುತ್ತೇನೆ. ನಾನು ಗುಲ್ಬರ್ಗದಲ್ಲಿ ಸರ್ಕಾರಿ ನೌಕರನಾಗಿದ್ದೆ ಎಂದರೆ ಸರಿ. ನಾನು ಜಯಣ್ಣ ಎಂಬುವವರಿಂದ ಸೈಟು ಖರೀದಿಸಿದ್ದೆ ಎಂದರೆ ಸರಿ. ಸದರಿ ಸೈಟ್ ಅನ್ನು 1994 ರಲ್ಲಿ ಖರೀದಿಸಿರುತ್ತೇನೆ. ಸದರಿ ಸೈಟ್ ಅನ್ನು ಖರೀದಿಸುವ ಪೂರ್ವದಲ್ಲಿ ದಾಖಲೆಗಳನ್ನು ನೋಡಿ ಖರೀದಿ ಮಾಡಿರುತ್ತೇನೆ.

ನಾನು ಪ್ರತಿವಾದಪತ್ರದ ಅನುಸೂಚಿ ಸ್ವತ್ತಾದ ಅಸೆಸ್ ಮೆಂಟ್ ಸಂ.5079/2211 ರ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ಸದರಿ ಸ್ವತ್ತಿನ ಅಸೆಸ್ ಮೆಂಟ್ ಸಂ.5079/2211 ರ ಖಾತಾ ಎಕ್ಸ್‌ಟ್ರ್ಯಾಕ್ಟ್ ಅನ್ನು 1993-94 ರಲ್ಲಿ ನೋಡಿರುತ್ತೇನೆ ಹಾಗೂ ಸೈಟನ್ನು ಸಹ: ನೋಡಿ ಖರೀದಿ ಮಾಡಿರುತ್ತೇನೆ. ನಾನು 1993-94 ರಲ್ಲಿ ನೋಡಿದಂತಹ: ಅಸೆಸ್ ಮೆಂಟ್ ಸಂ.5079/2211 ಎಕ್ಸ್‌ಟ್ರ್ಯಾಕ್ಟ್ ಅನ್ನು ಈ ದಾವೆಯಲ್ಲಿ ಅಥವಾ ಓ ಎಸ್ 374/2013 ರ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಅಸೆಸ್ ಮೆಂಟ್ ಸಂ.5079/2211 ಎಕ್ಸ್‌ಟ್ರ್ಯಾಕ್ಟ್ ಅನ್ನು ಹೊರತು ಪಡಿಸಿ ಬೇರೆ ದಾಖಲೆ ನೋಡಿರುವುದಿಲ್ಲ, ತಂದೆ-ಮಗ ಇಬ್ಬರ ಒಪ್ಪಿಗೆ ಪಡೆದು ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇನೆ.

ಪ್ರತಿವಾದಪತ್ರದ ಅನುಸೂಚಿ ಸ್ವತ್ತನ್ನು ನನಗೆ ಮಾರಾಟ ಮಾಡಿದ ಮುರುಡಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸದರಿ ಮುರುಡಪ್ಪ ರವರು ವಾಸವಿದ್ದ ಮನೆ ಯಾವುದು ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಮುರುಡಪ್ಪ ರವರ ಮನೆಗೆ ಹೋಗಿಯೇ ಇರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸೈಟಿನ ಪಕ್ಕದಲ್ಲಿ ಹೋಟೆಲ್ ಇಟ್ಟುಕೊಂಡಿದ್ದರು ಅಲ್ಲಿಗೆ ಹೋಗಿರುತ್ತೇನೆ. ಅವರು ಹೋಟೆಲ್ ಗೆ ಹೆಸರು ಇಟ್ಟುಕೊಂಡಿರಲಿಲ್ಲ. ನಾನು ಖರೀದಿ ಮಾಡಿದ ಸೈಟಿನಿಂದ ಸುಮಾರು 60 ಅಡಿ

ಅಂತರದಲ್ಲಿ ಅವರ ಹೋಟೆಲ್ ಇತ್ತು. ಸದರಿ ಹೋಟೆಲ್ ಈಗ ಮುಚ್ಚಿರುತ್ತದೆ, ಆದರೆ ಆ ಕಟ್ಟಡ ಇರುತ್ತದೆ. ಸದರಿ ಹೋಟೆಲ್ ಇದ್ದ ಕಟ್ಟಡವನ್ನು ಈಗ ಬೇರೆಯವರಿಗೆ ಮಾರಾಟ ಮಾಡಿದ್ದಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಹೋಟೆಲ್ ಇತ್ತು ಹಾಗೂ ಮನೆ ಇತ್ತು ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾವು ಮುರುಡಪ್ಪ ಎಂಬ ವ್ಯಕ್ತಿ ಇರದಿದ್ದರು ಸಹಃ ಸೃಷ್ಟಿಸಿ ಕಥೆಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಮುರುಡಪ್ಪ ರವರು ಈಗ ಜೀವಂತವಿರುವುದಿಲ್ಲ, ಅವರು ಯಾವಾಗ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ನನ್ನ ಮತ್ತು ಸದರಿ ಮುರುಡಪ್ಪ ರವರ ನಡುವೆ ಯಾವುದೇ ವೈಷಮ್ಯ ಇರಲಿಲ್ಲ. ಮುರುಡಪ್ಪ ಎಂಬ ವ್ಯಕ್ತಿಯ ಹೆಸರಿಗೆ ಅಸೆಸ್ ಮೆಂಟ್ ಸಂ.5079/2211 ರ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಉತ್ತರಕ್ಕೆ ಇರುವ ಮನೆ ನನ್ನದ್ದೇ ಆಗಿರುತ್ತದೆ, ಸದರಿ ಮನೆ ನಿಡಿ 25 ರಲ್ಲಿ ಸ್ವಲ್ಪ ಕಾಣುತ್ತಿರುವ ಮನೆ ನನಗೆ ಸೇರಿದ ಮನೆ ಆಗಿರುತ್ತದೆ. ಈಗ ನೋಡುತ್ತಿರುವ ಪೋಟೋದಲ್ಲಿ ಕಾಣುತ್ತಿರುವ ಮನೆಯು ನನ್ನ ಮನೆ ಆಗಿರುತ್ತದೆ. ಸಾಕ್ಷಿಯು ಪೋಟೋವನ್ನು ಗುರುತಿಸಿದ್ದರಿಂದ ಸದರಿ ಪೋಟೋವನ್ನು ನಿಪಿ-41 ಎಂದು ಗುರುತಿಸಲಾಯಿತು. ನಿಪಿ 41 ರಲ್ಲಿ ಕಾಣುತ್ತಿರುವ ಮನೆಯನ್ನು ನಾನು ಮುನ್ಸಿಪಾಲಿಟಿಯಿಂದ ಖರೀದಿಸಿರುತ್ತೇನೆ. ಎಷ್ಟನೇ ವರ್ಷದಲ್ಲಿ ಖರೀದಿಸಿದ್ದೇನೆ ಎಂದು ನನಗೆ ಈಗ ನೆನಪಿಲ್ಲ. ಸದರಿ ಮನೆಯನ್ನು ಯಾರಿಂದ ಖರೀದಿಸಿರುತ್ತೇನೆ ಎಂದು ದಾಖಲೆ ನೋಡಿ ಹೇಳಬೇಕಾಗುತ್ತದೆ. ನಿಪಿ41 ರ ಮನೆಯ ವಿಸ್ತೀರ್ಣ ನನಗೆ ನಿಖರವಾಗಿ ಗೊತ್ತಿಲ್ಲ, ಅದರ ಅಸೆಸ್ ಮೆಂಟ್ ಸಂಖ್ಯೆಯನ್ನು ಈಗ ಹೇಳಲಾಗುವುದಿಲ್ಲ. ನಿಪಿ 41 ರಲ್ಲಿ ಕಾಣುವ ನನ್ನ ಮನೆಯ ಚೆಕ್ಕುಬಂಧಿಃ- ಪೂರ್ವಕ್ಕೆ ಕೆಂಚಣ್ಣ ರವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನನ್ನದ್ದೆ ಸೈಟು, ಪಶ್ಚಿಮಕ್ಕೆ ಹೊನ್ನಕ್ಕ ರವರ ಮನೆ ಇದೆ. ನಿಪಿ 41 ರಲ್ಲಿ ಕಾಣುವ ನನ್ನ ಮನೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಈ ದಾವೆಯಲ್ಲಿ ಅಥವಾ ಓ ಎಸ್ ನಂ.374/2013 ರ ದಾವೆಯಲ್ಲಿ ನಿಪಿ 41 ರ ಮನೆಗೆ ಸಂಬಂಧಪಟ್ಟ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ.

ದಿಃ11.07.2013 ರಂದು ಮುನ್ಸಿಪಾಲಿಟಿಯವರು ಸ್ಥಳಕ್ಕೆ ಬಂದು ಅಳತೆ ಮಾಡಿದ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಅವರು ನನಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ.

ಮುನ್ಸಿಪಾಲಿಟಿಯವರು ಬಂದು ಅಳತೆ ಮಾಡಿ ನಿಪಿ 10 ರಂತೆ ಪೂರ್ವ ಪಶ್ಚಿಮ 14 ಅಡಿ ಉತ್ತರ ದಕ್ಷಿಣ 21 ಅಡಿ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 10 ರಲ್ಲಿ ಚೆಕ್ಕುಬಂಧಿ ಪೂರ್ವಕ್ಕೆ ಷಣ್ಮುಖಪ್ಪ, ಪಶ್ಚಿಮಕ್ಕೆ ತಿಮ್ಮಯ್ಯ, ಉತ್ತರಕ್ಕೆ ಮರುಡಪ್ಪ, ದಕ್ಷಿಣಕ್ಕೆ ರಸ್ತೆ ಎಂದು ನಮೂದು ಇದೆ ಎಂದರೆ ಅವರು ಸುಳ್ಳು ನಮೂದು ಮಾಡಿರುತ್ತಾರೆ. ಮುನ್ಸಿಪಾಲಿಟಿಯವರು ಬಂದು ಅಳತೆ ಮಾಡುವ ಪೂರ್ವದಲ್ಲಿ ನನಗೆ ನೋಟೀಸು ನೀಡಿರುತ್ತಾರೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಅನುಮತಿ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.